

### ಮೂರು ದಿನಗಳ ಯತ್ನ

ಆನೆಪಥದ ಸಂಪರ್ಕ ಕಡಿದುಹೋದರೆ ಆ ಪ್ರಾಣಿಗಳ ಮೇಲೆ ಹೇಗೆ ಪರಿಣಾಮ ಬೀರುತ್ತದೆ ಎಂಬುದನ್ನು ಮತ್ತೊಬ್ಬ ವನ್ಯಜೀವಿ ತಜ್ಞ ಅಜಯ್ ದೇಸಾಯಿ ಮನ ಮುಟ್ಟುವಂತೆ ವಿವರಿಸುತ್ತಾರೆ. ನೀಲಗಿರಿ ಜೈವಿಕ ವಲಯದಲ್ಲಿ ಆನೆಗಳ ವರ್ತನೆಯಲ್ಲಿ ಆಗುತ್ತಿರುವ ಬದಲಾವಣೆಗಳ ಕುರಿತು ವಿಶೇಷವಾಗಿ ಅಧ್ಯಯನ ನಡೆಸಿದವರು ಅವರು.

‘ಮೆಟ್ಟುಪಾಳ್ಯಂ ವಲಯದಲ್ಲಿ ಆನೆಕಾಡನ್ನು ಹೆದ್ದಾರಿಯೊಂದು ಸೀಳಿಕೊಂಡು ಹೋಗುತ್ತದೆ. ಗಂಟೆಗೆ 600–800 ವಾಹನಗಳು ಈ ರಸ್ತೆಯಲ್ಲಿ ಚಲಿಸುತ್ತವೆ. ಒಮ್ಮೆ ಆನೆಗಳ ಹಿಂಡೊಂದು ಈ ರಸ್ತೆಯನ್ನು ದಾಟಿಕೊಂಡು ಹೋಗಬೇಕಿತ್ತು. ಅವುಗಳ ಸ್ವಾಭಾವಿಕ ಪಥ ಅದಾಗಿತ್ತು. ನಾವೂ ಹತ್ತಿರದಲ್ಲೇ ಬಿಡಾರ ಹೂಡಿ ಅಲ್ಲಿನ ಬೆಳವಣಿಗೆಗಳನ್ನು ಬಲು ಸೂಕ್ಷ್ಮವಾಗಿ ಗಮನಿಸುತ್ತಿದ್ದೆವು’

‘ಆನೆಗಳು ದಿನದಲ್ಲಿ ಹತ್ತಾರು ಬಾರಿ ಆ ರಸ್ತೆಯನ್ನು ದಾಟಲು ಪ್ರಯತ್ನಿಸಿದವು. ಸಾಧ್ಯವೇ ಆಗಲಿಲ್ಲ. ರಾತ್ರಿಯೂ ಇದೇ ರೀತಿ ರಸ್ತೆವರೆಗೆ ಬಂದು, ಪುನಃ ಕಾಡಿನೊಳಗೆ ಸರಿದು ಪಡಿಪಾಟಲು ಅನುಭವಿಸಿದವು. ವಾಹನಗಳ ಕಾಟ ತಪ್ಪಲಿಲ್ಲ. ಹೀಗೇ ಮೂರು ದಿನಗಳು ಕಳೆದುಹೋದವು. ಮೂರು ದಿನಗಳ ಸತತ ಪ್ರಯತ್ನದ ಬಳಿಕ ಕೊನೆಗೂ ಅವುಗಳಿಗೆ ರಸ್ತೆ ದಾಟಲು ಸಾಧ್ಯವಾಯಿತು. ಅಷ್ಟರಲ್ಲಿ ಅವುಗಳು ಮಾನಸಿಕವಾಗಿ ಬಳಲಿದ್ದವು. ಸಿಟ್ಟಿನಿಂದ ಕುದಿಯುತ್ತಿದ್ದವು. ಕೆಲವು ಆನೆಗಳು ಪುಂಡಾಟಕ್ಕೂ ಇಳಿದಿದ್ದವು. ಗಜಪಥದ ಸಂಪರ್ಕ ಕಡಿದು ಹೋಗಿದ್ದರಿಂದ ಆಗುವ ಸಮಸ್ಯೆಗೆ ಇದೊಂದು ಸಣ್ಣ ಉದಾಹರಣೆ’ ಎಂದು ದೇಸಾಯಿ ಹೇಳುತ್ತಾರೆ.

### ಕರಿಕಲ್ಲಿನ ಸಿಡಿಮದ್ದು

ಕಾಡಿನಲ್ಲಿ ಹೆಚ್ಚುತ್ತಿರುವ ಕೃಷಿ ಚಟುವಟಿಕೆ, ಸಂತ್ರಸ್ತರಿಗೆ ಒದಗಿಸುತ್ತಿರುವ ಪುನರ್ವಸತಿ, ಅರಣ್ಯದ ಒತ್ತುವರಿ, ಹೆದ್ದಾರಿ ನಿರ್ಮಾಣ, ಅಕ್ರಮ ಗಣಿಗಾರಿಕೆ... ಪಟ್ಟಿ ಮಾಡುತ್ತಾ ಹೋದರೆ ಸಮಸ್ಯೆಗೆ ಇಂತಹ ಹತ್ತಾರು ಕಾರಣಗಳು ಸಿಗುತ್ತವೆ. ಆನೆಪಥದ ಅಂಚಿನಲ್ಲಿ ಕರಿಕಲ್ಲು ಗಣಿಗಾರಿಕೆ ಹಾವಳಿ ಸಹ ಎಲ್ಲೆ ಮೀರಿದೆ. ಭೂಮಿ ಬಗೆದು ಕರಿಕಲ್ಲು ಹೊರತೆಗೆಯಲು

## ಕರ್ನಾಟಕದ್ದು 6 ಸಾವಿರ

ಆನೆ ಗಣತಿ ಪ್ರಕಾರ ಭಾರತದಲ್ಲಿ ಸುಮಾರು 26 ಸಾವಿರ ಆನೆಗಳಿವೆ. ಈ ಪೈಕಿ ದಕ್ಷಿಣ ಭಾರತದಲ್ಲಿ ಸುಮಾರು 12 ಸಾವಿರ ಕಾಡಾನೆಗಳಿವೆ. ಅವುಗಳಲ್ಲಿ ಕರ್ನಾಟಕದ ಪಾಲು ಆರು ಸಾವಿರ.

ದೇಶದಲ್ಲಿ 27 ಆನೆ ರಕ್ಷಿತಾರಣ್ಯಗಳಿವೆ. 88 ಆನೆ ಕಾರಿಡಾರ್‌ಗಳಿವೆ. ಅದರಲ್ಲಿ ಮಾನವನ ಹಸ್ತಕ್ಷೇಪಕ್ಕೆ ಒಳಗಾಗದೆ ಸಂಪೂರ್ಣವಾಗಿ ಸಂರಕ್ಷಿತವಾಗಿರುವ ಆನೆ ಕಾರಿಡಾರ್‌ಗಳ ಸಂಖ್ಯೆ ಕೇವಲ 24.

ದಕ್ಷಿಣ ಭಾರತದಲ್ಲಿ ಕರಡಿಕಲ್–ಮಹದೇಶ್ವರ, ತಳಿ, ಎಡೆಯರಹಳ್ಳಿ–ದೊಡ್ಡಸಂಪಿಗೆ, ಚಾಮರಾಜನಗರ–ತಲಮಲೈ, ಚಾಮರಾಜನಗರ–ತಲಮಲೈ–ಮೂಡಳ್ಳಿ ಹಾಗೂ ಕಣಿಯನಪುರ–ಈ ಪರಿಸರವನ್ನು ‘ಆನೆ ಕಾರಿಡಾರ್’ ಎಂದು ಗುರುತಿಸಲಾಗಿದೆ.

ಚಾಮರಾಜನಗರ ಜಿಲ್ಲೆಯ ಕಾವೇರಿ ವನ್ಯಜೀವಿಧಾಮ, ಮಲೆಮಹದೇಶ್ವರ ವನ್ಯಜೀವಿಧಾಮ, ಬಿಳಿಗಿರಿರಂಗನಾಥಸ್ವಾಮಿ ಹುಲಿ ರಕ್ಷಿತಾರಣ್ಯ, ಬಂಡೀಪುರ ರಾಷ್ಟ್ರೀಯ ಉದ್ಯಾನ, ನಾಗರಹೊಳೆ ರಾಷ್ಟ್ರೀಯ ಉದ್ಯಾನ ರಾಜ್ಯದಲ್ಲಿರುವ ಆನೆಗಳ ನೆಲೆಗಳಾಗಿವೆ.

ಹಾಸನ ಜಿಲ್ಲೆಯಲ್ಲಿ ಆನೆಗಳಿಗೆ ಆವಾಸಸ್ಥಾನ ಕಲ್ಪಿಸಲು ರೈತರಿಂದ ಕೃಷಿಭೂಮಿಯನ್ನು ಖರೀದಿಸುವ ಪ್ರಸ್ತಾವ ಇತ್ತು. ಹೀಗೆ ಆವಾಸಸ್ಥಾನ ಕಲ್ಪಿಸಲು ನೂರಾರು ಹಳ್ಳಿಗಳ ಕೃಷಿಭೂಮಿ ಬೇಕು. ನೂರು ಹೆಕ್ಟೇರ್ ಭೂಮಿ ಒಂದೇ ಮುಷ್ಟಿಯಲ್ಲಿ ಸಿಕ್ಕರೆ ಅದು ಅರ್ಧ ಚದರ ಕಿ.ಮೀ. ಆವಾಸಸ್ಥಾನ ಆಗುತ್ತದೆ. ಆನೆಗಳ ಒಂದು ಗುಂಪಿಗೆ ಬೇಕಿರುವುದು 600 ಚದರ ಕಿ.ಮೀ. ಅರಣ್ಯ ಪ್ರದೇಶ!

ನೂರಾರು ಹಳ್ಳಿಗಳ ಜನ ಕೃಷಿಭೂಮಿಯನ್ನು ಬಿಟ್ಟುಕೊಡಲು ಒಮ್ಮತದ ನಿರ್ಧಾರಕ್ಕೆ ಬರುವುದು ಒತ್ತಟ್ಟಿಗಿರಲಿ, ಒಂದೇ ಹಳ್ಳಿಯ ರೈತರಲ್ಲೂ ಸಾಕಷ್ಟು ಭಿನ್ನಾಭಿಪ್ರಾಯಗಳು ಬಂದವು. ಹೀಗಾಗಿ ತಜ್ಞರ ತಂಡ ಈ ಯೋಜನೆಯನ್ನು ಕೈಬಿಡುವಂತೆ ಶಿಫಾರಸು ಮಾಡಿತ್ತು. ಆನೆಗಳ ದಾಳಿಯಿಂದ ರೈತರು ಪ್ರತಿವರ್ಷ ಬೆಳೆಹಾನಿ ಅನುಭವಿಸುವುದು ಮಾಮೂಲಿ. ಅಂತಹ ರೈತರಿಗೆ ಆದ್ಯತೆ ಮೇರೆಗೆ ಗರಿಷ್ಠ ಪ್ರಮಾಣದ ಪರಿಹಾರವನ್ನು ಶೀಘ್ರ ಬಿಡುಗಡೆ ಮಾಡಿದರೆ ಈ ದೈತ್ಯಪ್ರಾಣಿಗಳ ಉಪಟಳ ಸಹಿಸಿಕೊಳ್ಳುವ ಮನೋಭಾವ ಕಾಡಿನಂಚಿನ ರೈತರಿಗೆ ಬಂದೀತು ಎನ್ನುವುದು ವನ್ಯಜೀವಿತಜ್ಞರ ಅಭಿಮತ.





ಶ್ರೀ ಪಂಚಮುಖಿ ಜ್ಯೋತಿಷ್ಯಂ

INDIA'S MOST POPULAR ASTROLOGER

ಪಂಡಿತ. ಶ್ರೀ ಗಣೇಶ್ ಕುಮಾರ್ ಶ್ರೀ ಶ್ರೀ ಹನುಮಾನ್ ಆರಾಧಕರು

ಕೇರಳ, ಕಲ್ಕತ್ತಾದ ಸಾವಿರಾರು ವರ್ಷಗಳ ಹಿಂದಿನ ಪ್ರಾಚೀನ ನಾಡಿಗ್ರಂಥ ಆಧಾರದಿಂದ ಸರ್ವಮಂತ್ರ ವಿದ್ಯೆ, ಜ್ಯೋತಿಷ್ಯ ಶಾಸ್ತ್ರ ಪಂಚಮಹಾಗುರುಗಳ ಬೋಧನೆಯಿಂದ ಯೋಗ ಯಜ್ಞಗಳ ಮೂಲಕ ಸರ್ವ ವಿದ್ಯೆಯನ್ನು ತಮ್ಮ ವಶದಲ್ಲಿರಿಸಿಕೊಂಡಿರುವವರು. ವಶೀಕರಣ, ಮದುವೆ, ಸಂತಾನ, ದಾಂಪತ್ಯ, ಪ್ರೇಮವಿಚಾರ, ಲೈಂಗಿಕ, ಮಾನಸಿಕ, ಗೃಹಶಾಂತಿ, ವಿದ್ಯೆ, ಆರೋಗ್ಯ, ವಿದೇಶ ಪ್ರಯಾಣ, ಹಣಕಾಸು, ವ್ಯಾಪಾರ,ಉದ್ಯೋಗ, ಕೋರ್ಟ್ ಕೇಸು, ಸಾಲಬಾಧೆ, ಮಾಟಬಾಧೆ, ಶತ್ರುಕಾಟ, ಅಲ್ಲದೆ ರಾಜಯೋಗ ವಶ ಮತ್ತು ಅಖಂಡ ಯೋಗವಶಗಳು, ಇನ್ನಿತರ ನಿಮ್ಮ ಯಾವುದೇ ಕಠಿಣ, ನಿಗೂಢ ಮತ್ತು ಗುಪ್ತ ಸಮಸ್ಯೆಗಳಿಗೆ, ಸಲಹೆ ಮತ್ತು ಪರಿಹಾರ ಶತಸಿದ್ಧ.

600 ವರ್ಷ ಹಳೆಯ ಪಂಚಸಿದ್ಧಿ ತಂತ್ರಗಳಿಂದ ನಿಮ್ಮ ದುಶ್ಚಟ, ದೀರ್ಘಾವಧಿ, ಲೈಂಗಿಕ, ಸಂತಾನ, ಸಮಸ್ಯೆಗಳಿಗೆ ಸನಾತನ ಪ್ರಕ್ರಿಯೆಗಳಿಂದ ಅತೀ ಶೀಘ್ರದಲ್ಲಿ ಸಮಗ್ರ ಪರಿಹಾರ ಕಲ್ಪಿಸುತ್ತಿರುವವರು.

ವಿ.ಸೂ.: ಇಲ್ಲಿ ಹೇಳುವ ವಿಷಯಗಳೆಲ್ಲವೂ ಗುಪ್ತವಾಗಿರುವುದರಿಂದ ನಿಮ್ಮ ಯಾವುದೇ ಸಮಸ್ಯೆಗಳನ್ನು ಹೇಳಲು ಹಿಂಜರಿಯಬೇಕಾಗಿಲ್ಲ. ದೂರವಾಣಿ ಹಾಗೂ ಪತ್ರದ ಮೂಲಕ ವಿವರಗಳನ್ನು ಪಡೆಯಬಹುದು.

ಬೆಂಗಳೂರು ಖಾಯಂ ಮನೆ ವಿಳಾಸ ನಂ.167/3, ಮೊದಲನೇ ಮಹಡಿ, 1ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಮುತ್ತುರಾಯಸ್ವಾಮಿ ದೇವಸ್ಥಾನದ ಹತ್ತಿರ, ಮೈಸೂರು ಸರ್ಕಲ್, (ಸಿರಸಿ ವೃತ್ತ), ಚಾಮರಾಜಪೇಟೆ, ಬೆಂಗಳೂರು–18.

ಮೈಸೂರಿನಲ್ಲಿಯೂ ಲಭ್ಯವಿರುತ್ತಾರೆ

ಸಮಸ್ಯೆ ಏನೇ ಇರಲಿ, ಎಷ್ಟೇ ಕಠಿಣವಾಗಿರಲಿ 600 ವರ್ಷಗಳ ಹಳೆಯ 108 ಜ್ಯೋತಿಷ್ಯ ತಂತ್ರಗಳಿಂದ ಮಹೋನ್ನತ ಪರಿಹಾರಗಳು.

ಬೆಂಗಳೂರು ಮೈಸೂರು 9880444450